

ಮಿಸೆಸ್ ಸೇವಿಯರ್

ಈತನಲ್ಲಿದೆ!" ಎಂದು ಅವರಿಗೆ ಅನ್ನಿಸಿತು. ಮೊದಲ ಬಾರಿಯೆ ಸ್ವಾಮೀಜಿ ಮಿಸೆಸ್ ಸೇವಿಯರ್ ಅನ್ನು "ತಾಯಿ!" ಎಂದು ಸಂಬೋಧಿಸಿದರು; "ನನ್ನೊಡನೆ ಭಾರತ ದೇಶಕ್ಕೆ ಬರುವಿರಾ? ನಿಮಗೆ ನನ್ನಲ್ಲಿರುವ ಶ್ರೇಷ್ಠವಾದುದ್ದನ್ನೆಲ್ಲಾ ನೀಡುವೆ" ಎಂದು ಆಹ್ವಾನಿಸಿದರು. ಅಂದಿನಿಂದ ಸ್ವಾಮೀಜಿ ಆ ದಂಪತಿಗಳಿಗೆ ಕೇವಲ ಗುರುವಲ್ಲದೆ, ಒಬ್ಬ ಸುಪುತ್ರನೂ ಆಗಿಬಿಟ್ಟರು. ಇವರಿಬ್ಬರನ್ನು ಅವರು ಇಂಗ್ಲೆಂಡಿನ ಕಾರ್ಯದಿಂದ ತಮಗೆ ದೊರೆತ ಅತಿ ಸುಂದರಪುಷ್ಪಗಳೆಂದು ಪರಿಗಣಿಸಿದ್ದರು.

ಸ್ವಾಮಿ ವಿವೇಕಾನಂದರು ಹಿಮಾಲಯದ ಶಿಖರದಲ್ಲಿ ಅದ್ವೈತಕ್ಕೇ ಮುಡಿಪಾದ ಒಂದು ಮಠವನ್ನು ಸ್ಥಾಪಿಸಬೇಕೆಂದು ಕನಸು ಕಂಡಿದ್ದರು. ಇದನ್ನು ನನಸಾಗಿಸಲು ಸೇವಿಯರ್ ದಂಪತಿಗಳು ತಮ್ಮ ಸರ್ವಸ್ವವನ್ನೂ ತೊರೆದು, ಸ್ವಾಮೀಜಿಯ ಜೊತೆಗೆ ಭಾರತಕ್ಕೆ ಬಂದರು. ತಮ್ಮ ಆಸ್ತಿಯನ್ನೆಲ್ಲಾ ಮಾರಾಟ ಮಾಡಿ ಸ್ವಾಮೀಜಿಯ ಈ ಕಾರ್ಯಕ್ಕೆ ಆರ್ಥಿಕ ನೆರವನ್ನು ನೀಡಿದರು. ಹಿಮಾಲಯದ ಮಾಯಾವತಿ ಎಂಬಲ್ಲಿ ಸ್ಥಾಪಿತಗೊಂಡ 'ಅದ್ವೈತ ಆಶ್ರಮ'ವು ಇವರ ಪರಿಶ್ರಮದ ಫಲವೇ ಆಗಿದೆ.

### ಉಪಸಂಹಾರ

ಹೀಗೆ ಸ್ವಾಮಿ ವಿವೇಕಾನಂದರಿಗೆ ನೆರವಿತ್ತ ಹಲವಾರು ಮಾತೆಯರ ಹೆಸರನ್ನು ಉಲ್ಲೇಖಿಸಬಹುದು. ಈ ಮಹಿಳೆಯರ ನಿಸ್ವಾರ್ಥ ಪ್ರೇಮವನ್ನು, ಧೀಶಕ್ತಿಯನ್ನು ಎಷ್ಟು ಹೊಗಳಿದರೂ ಸ್ವಾಮೀಜಿಗೆ ತೃಪ್ತಿಯಾಗುತ್ತಿರಲಿಲ್ಲ. ೧೮೯೭ ರಲ್ಲಿ ಜೆ.ಜೆ. ಗುಡ್‌ವಿನ್, ಮಿಸೆಸ್ ಓಲಿ ಬುಲ್‌ಗೆ ಹೀಗೆ ಕಾಗದ ಬರೆಯುತ್ತಾನೆ: "ಒಂದೆರೆಡು ವಾರಗಳ ಹಿಂದೆ ಸ್ವಾಮೀಜಿ ಹೀಗೆ ಹೇಳುತ್ತಿದ್ದರು: 'ನಾನು ಮತ್ತೊಮ್ಮೆ ಜನ್ಮವೆತ್ತಿ ಬರುವುದಾದರೆ, ಖಂಡಿತವಾಗಿಯೂ ಅಮೆರಿಕದ ಮಹಿಳೆಯಾಗಿ ಬರುವೆ!' ಎಂದು."

೧೮೯೪ ರಲ್ಲಿ ಖೇತ್ರಿ ಮಹಾರಾಜರಿಗೆ ಸ್ವಾಮೀಜಿ ಹೀಗೆ ಪತ್ರ ಬರೆಯುತ್ತಾರೆ: **"ಅಮೆರಿಕದ ಮಹಿಳೆಯರೆ! ನಿಮಗೆ ನನ್ನ ಆಳವಾದ ಕೃತಜ್ಞತೆಯನ್ನು ಅರ್ಪಿಸಲು ನೂರು ಜನ್ಮಗಳೂ ಸಾಲದು. ನನ್ನ ಕೃತಜ್ಞತೆ ಅರ್ಪಿಸಲು ಪದಗಳೇ ಸಾಲವು, ಹಿಂದೂ ಮಹಾಸಾಗರವೇ ಮಸಿಯ ಕುಡಿಕೆಯಾಗಿ, ಬೆಟ್ಟಗಳಲ್ಲೆಲ್ಲಾ ಅತಿ ಎತ್ತರವಾದ ಹಿಮಾಲಯವು ಲೇಖನಿಯಾಗಿ, ಭೂಮಿತಾಯಿಯೇ ಕಾಗದವಾಗಿ, ಕಾಲವು ಲೇಖಕನಾದರೂ, ನನ್ನ ಕೃತಜ್ಞತೆ ತಿಳಿಸಲು ಅವು ಏನೇನೂ ಸಾಲದು!"** ✶

**ವಾರ್ತಾ ವಿಶ್ಲೇಷಣೆ**

## ಟಿ.ವಿ.–ಕಂಪ್ಯೂಟರ್ ಮತ್ತು ಕೌಟುಂಬಿಕ ಸಂಬಂಧ

ನೀವು ನಿಮ್ಮ ಮಕ್ಕಳನ್ನು ಟಿ.ವಿ. ನೋಡದಂತೆ ಅಥವಾ ಕಂಪ್ಯೂಟರ್ ಮುಂದೆ ಗಂಟೆಗಟ್ಟಲೆ ಕುಳಿತುಕೊಳ್ಳದಂತೆ ಕಟ್ಟುಪಾಡು ಮಾಡುತ್ತಿದ್ದೀರೇನು? ಹಾಗಾದರೆ ನೀವು ಮಾಡುತ್ತಿರುವುದು ಸರಿಯಾಗಿಯೇ ಇದೆ ಎನ್ನುತ್ತಾರೆ ನ್ಯೂಜಿಲ್ಯಾಂಡ್‌ನ ಅಕ್‌ಲ್ಯಾಂಡ್ ವಿಶ್ವವಿದ್ಯಾನಿಲಯದ ಸಂಶೋಧಕರು (*ಡೆಕ್ಕನ್ ಹೆರಾಲ್ಡ್*, ೪–೩–೨೦೧೦). ಅವರು ನಡೆಸಿದ ಸಂಶೋಧನೆಗಳಿಂದ ಯಾವುದೇ ಸ್ಕ್ರೀನ್ ಅನ್ನು ಬಹಳ ಹೊತ್ತು ದಿಟ್ಟಿಸಿ ನೋಡುವ ಪರಿಪಾಠ ಬೆಳೆಸಿಕೊಂಡಿರುವ ಮಕ್ಕಳು ಮಾನವೀಯ ಸಂಬಂಧಗಳನ್ನು ಸರಿಯಾಗಿ ಬೆಳೆಸಿ ಕೊಳ್ಳುವುದಿಲ್ಲ. ಇದರಿಂದ ಕುಟುಂಬದಲ್ಲಿನ ಹೊಂದಾಣಿಕೆ ಏರುಪೇರಾಗುತ್ತದೆ. ಟಿ.ವಿ, ಕಂಪ್ಯೂಟರ್ ಕಡಮೆ ಮಾಡಿದರೆ, ಮಕ್ಕಳು ಸರಿಯಾಗಿ ಇರುತ್ತಾರೋ ಎನ್ನುವ ಪ್ರಶ್ನೆಗೆ "ಹೌದು" ಎನ್ನುತ್ತಾರೆ ವಿಜ್ಞಾನಿಗಳು. ಇದರಿಂದ ಮಕ್ಕಳು, ತಮ್ಮ ಸ್ನೇಹಿತರೊಡನೆ, ತಂದೆತಾಯಿಗಳೊಡನೆ ಸುಭದ್ರ ಬಾಂಧವ್ಯವನ್ನು ಹೊಂದಲು ಅನುಕೂಲವಾಗುತ್ತದೆ ಎನ್ನುವುದು ಅವರ ಅಭಿಪ್ರಾಯ. ಮಕ್ಕಳನ್ನು ಎರಡು ಗಂಟೆಗಳಿಗಿಂತ ಹೆಚ್ಚು ಟಿ.ವಿ.ಯನ್ನಾಗಲಿ, ಕಂಪ್ಯೂಟರನ್ನಾಗಲಿ ನೋಡಲು ಬಿಡಬಾರದು; ಏಕೆಂದರೆ, ಅವರು ಅವುಗಳಿಗೆ ದಾಸರಾದಷ್ಟೂ, ಮಾನವೀಯ ಸಂಬಂಧಗಳನ್ನು ಬೆಳೆಸಿಕೊಳ್ಳುವಲ್ಲಿ ವಿಫಲರಾಗುತ್ತಾರೆ. ಸ್ಕ್ರೀನ್ ಆಧಾರಿತ ತಂತ್ರಜ್ಞಾನವು ಯುವಜನರ ಸಾಮಾಜಿಕ, ಮನೋವೈಜ್ಞಾನಿಕ ಮತ್ತು ದೈಹಿಕ ಸುಸ್ಥಿತಿಗೆ ಮಾರಕವಾಗಬಲ್ಲುದು. ಅದನ್ನು ನಿಯಂತ್ರಿಸುವ ಆವಶ್ಯಕತೆ ಇದೆ. ಇದು ವಿಜ್ಞಾನಿಗಳ ಕಿವಿಮಾತು.

ಇಂದು ಯಾವುದೇ ಮನೆಗೆ ಹೋದರೂ, ಟಿ.ವಿ. (ನರಕ?) ಲೋಕದ ದರ್ಶನ ಆಗುತ್ತಲೇ ಇರುತ್ತದೆ. ಮಕ್ಕಳು ಅದರ ಮುಂದೆ ಕುಳಿತೇ ಹೋಂವರ್ಕ್ ಮಾಡುತ್ತಾರೆ, ಅದನ್ನು ನೋಡುತ್ತಲೇ ಊಟ ಮಾಡುತ್ತಾರೆ. ಪ್ರಾಯಶಃ ಅದನ್ನು ನೋಡುತ್ತಲೇ ನಿದ್ದೆ ಹೋಗುತ್ತಾರೆ. ಎಂತಹ ದಾರುಣ ಸ್ಥಿತಿ ಇದು! ನಮ್ಮ ಮನೆ ಇದರಿಂದ ನಂದನವನವಾಗುವ ಬದಲು ಶ್ಮಶಾನವಾಗುತ್ತದೆ; ಅನವಶ್ಯಕ ಮಾಹಿತಿ ಮತ್ತು ಮನರಂಜನೆಗಳೆಂಬ (ಮನದಂಡನೆ?) ಕಸಕೊಳೆಯ ರಾಶಿಯೇ ನಮ್ಮ ಕಂದಮ್ಮಗಳ ಮನಸ್ಸಿನಲ್ಲಿ ಸೇರಿಕೊಳ್ಳುತ್ತ ಹೋಗುತ್ತದೆ. ಇದರಿಂದ ಅವರ ವ್ಯಕ್ತಿತ್ವ ಕುಂಠಿತವಾಗುತ್ತದೆ. ಈ ಉಪದ್ರವ ಬೇಕೆ? 'ಬೇಡ' ಎನ್ನುವಿರಾದರೆ ಈಗಲೇ ಟಿ.ವಿ. ಆರಿಸಿ, ಕಂಪ್ಯೂಟರ್ ಬಂದ್ ಮಾಡಿ. ✶